

ಬ್ರಹ್ಮದತ್ತ ಕೇಳಿದ. ಆ ವ್ಯಕ್ತಿ ಆಶ್ಚರ್ಯದಿಂದ ಬ್ರಹ್ಮದತ್ತನನ್ನು ನೋಡುತ್ತ, 'ನನ್ನೂರಿನಲ್ಲಿರುವುದು ಒಂದೇ ಬಾವಿ. ನಾಲ್ಕುನೂರು ವರ್ಷಗಳಿಗೂ ಹಿಂದೆ ನಮ್ಮ ಪೂರ್ವಿಕರು ತೆಗೆಸಿದ್ದು. ಇವತ್ತಿಗೂ ನಾವೆಲ್ಲ ಅದೇ ಬಾವಿಯ ನೀರನ್ನು ಉಪಯೋಗಿಸುವುದು. ಆ ಬಾವಿಯ ನೀರನ್ನು ಒಮ್ಮೆ ಕುಡಿದರೆ ಸಾಕು, ನೀರು ಕುಡಿದ ವ್ಯಕ್ತಿಯ ವಂಶಾಣುವಿನಲ್ಲಿ ಚಿರಂಜೀವಿತ್ವ ಎನ್ನುವುದು ಬೇರುಬಿಟ್ಟು ಕುಳಿತುಕೊಳ್ಳುತ್ತದೆ. ವಂಶವೇ ಮೃತ್ಯುಂಜಯವಾಗುತ್ತದೆ. ಆ ಬಾವಿ ಬಿಟ್ಟರೆ ನಮಗೆ ಬೇರೆ ಗತಿಯೇ ಇಲ್ಲ. ಯಾಕೆ ವೆಂಕಟ್ರಮಣ ನಿಮಗೆ ಇದನ್ನೆಲ್ಲ ಹೇಳಿಲ್ಲವೆ' ಎಂದು ಅಚ್ಚರಿ ವ್ಯಕ್ತಪಡಿಸಿದ. ಬ್ರಹ್ಮದತ್ತನ ಮೈ ಬೆವರೊಡೆದು ಕಣ್ಣುಗಳಿಗೆ ಕತ್ತಲಾವರಿಸಿದಂತಾಗಿ ಎದುರು ಸೀಟಿನ ಕಬ್ಬಿಣದ ಸಲಾಕೆಯನ್ನು ಬಿಗಿಯಾಗಿ ಹಿಡಿದುಕೊಂಡ. ಸ್ವಲ್ಪ ಹೊತ್ತಿನ ನಂತರ ತಣ್ಣನೆಯ ಗಾಳಿ ಮೈಯನ್ನು ಸೋಕಿದಂತಾಗಿ ಕಣ್ಣು ಬಿಟ್ಟು ನೋಡಿದ. ಬಸ್ಸು ಚಲಿಸುತ್ತಿತ್ತು. ಪಕ್ಕದಲ್ಲಿನ ಸೀಟು ಖಾಲಿ ಇತ್ತು.

★★★

ಶರ್ಮಾ ಹೇಳುವುದನ್ನು ನಿಲ್ಲಿಸಿ ದೀರ್ಘವಾಗಿ ಉಸಿರೆಳೆದುಕೊಂಡ. ನಮ್ಮೆಲ್ಲರನ್ನು ವಿಚಿತ್ರವಾದ ಅನುಭವವೊಂದು ಆವರಿಸಿತ್ತು. ಶರ್ಮಾ ಹೇಳಿದ ವಿಷಯಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ತೋಚದೆ ಮೌನವಾಗಿ ಎದ್ದು ಗುಡ್ಡ ಇಳಿಯತೊಡಗಿದೆವು. ನಾವು ಹಿಂತಿರುಗುವ ದಾರಿಯಲ್ಲಿ ಮೊದಲ ಮನೆಯೇ ಶರ್ಮಾನದು. ಗೇಟು ತೆರೆದು ಒಳ ಹೋಗುತ್ತಿದ್ದ ಶರ್ಮಾನನ್ನು ನಿಲ್ಲಿಸಿ ನಾನು ಕೇಳಿದೆ, 'ಹೌದು ಆ ಬ್ರಹ್ಮದತ್ತನ ಪರಿಚಯ ನಿನಗೆ ಹೇಗಾಯಿತು?' ಶರ್ಮಾ ಒಮ್ಮೆ ಆಕಾಶದತ್ತ ದೃಷ್ಟಿ ಹರಿಸಿ ಒಂದುತೆರನಾದ ನಿರ್ಲಿಪ್ತ ಭಾವದಿಂದ, 'ಹತ್ತು ವರ್ಷಗಳಿಂದ ನಿಮಗೆಲ್ಲ ಪರಿಚಿತನಿರುವ ಈ ಬಿ.ಡಿ. ಶರ್ಮಾನೆ ಆ ನತದೃಷ್ಟ ಬ್ರಹ್ಮದತ್ತ ಶರ್ಮಾ' ಎಂದು ಹೇಳಿದವನೆ ಮನೆ ಒಳಗೆ ಸೇರಿಕೊಂಡು ಬಾಗಿಲು ಹಾಕಿದ. ಶರ್ಮಾ ಮುಚ್ಚಿದ ಬಾಗಿಲನ್ನೆ ಬೆರಗಾಗಿ ನೋಡುತ್ತ ನಾವು ಎಷ್ಟೋ ಹೊತ್ತಿನವರೆಗೆ ಅಲ್ಲಿಯೇ ನಿಂತಿದ್ದೇವು.

## ರಾಜಕುಮಾರ ವ್ಹಿ. ಕುಲಕರ್ಣಿ

ಮೂಲತಃ ಕಲಬುರ್ಗಿ ತಾಲ್ಲೂಕಿನ ಕುಮಸಿಯವರು. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಸ್ತುತ ಬಾಗಲಕೋಟೆಯ ಬಿ.ವಿ.ವಿ. ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರು. 'ಪೂರ್ಣ ಸತ್ಯ', 'ಮನದ ಮಾತು', 'ಅನಾವರಣ', 'ಅನ್ವೇಷಣೆ', 'ಬೊಗಸೆಯಲ್ಲಿ ಕಡಲು', 'ಭಾವಭಿತ್ತಿ', 'ಹೆಜ್ಜೆ ಮೂಡಿದ ಹಾದಿ' ಎಂಬ ಲೇಖನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ.